ವಾಚುಗಳು ಬಹಳ ಸೊಗಸಾದ ವಿನ್ಯಾಸದಲ್ಲಿ ಕೈಗೆಟಕುವ ದರದಲ್ಲಿ ಮಾರುಕಟ್ಟೆಯಲ್ಲಿವೆ. ಚಿನ್ನದ ಆಭರಣದ ಅಂಗಡಿಗಳಲ್ಲಿ ವಾಚುಗಳು ಕೂಡ ಖರೀದಿಗೆ ಸಿಗುತ್ತದೆ.

### ಬೆಳ್ಳಿಯ ವಾಚುಗಳ ವಿಧಗಳು

- ಮುತ್ತು ಪೋಣಿಸಿದ ಚೈನುಗಳ ವಾಚುಗಳು
- ಹರಳು ಜೋಡಿಸಿದ ಚೈನುಗಳ ವಾಚುಗಳು
- ಒಂದಕ್ಕೊಂದು ಹೆಣೆದ ಬೆಳ್ಳಿಯ ಚೈನುಗಳ ವಾಚುಗಳು
- ರೋಸ್ ಗೋಲ್ಡ್ ಫಿನಿಷ್ ಹೊಂದಿದ ವಾಚುಗಳು
- ಆಕ್ಸಿಡೈಸ್ಡ್ ಫಿನಿಷ್ ವಾಚುಗಳು
- ಅಗಲವಾಗಿರುವ ವಿನ್ಯಾಸದ ಚೈನ್
- ಸಪೂರವಾಗಿರುವ ಸಣ್ಣ ಡಯಲ್‌ನದ್ದು
- ಬಳೆಯಂತಿದ್ದು ನೋಡಲು ಸುಂದರ ವಾಚು
- ಕಡಾ ಬಳೆಯಲ್ಲಿ ವಾಚ್ ಅಳವಡಿಸಿದ್ದು

### ಕೈಗೆ ಹೇಗೆ ಶೋಭೆ ನೀಡುತ್ತದೆ?

ದೇಹಕ್ಕೆ ಬೆಳ್ಳಿ ವಾಚು ಹಿತಕರ. ಬಣ್ಣ ಮಾಸಿ ಹೋಗುತ್ತದೆ ಎಂದು ತಲೆಬಿಸಿ ಬೇಡ. ಬೆಳ್ಳಿಯ ವಾಚುಗಳು ಹೊಳಪಿನಿಂದ ಕೂಡಿದ್ದು, ಮ್ಯಾಟ್ ಫಿನಿಷ್, ಆಕ್ಸಿಡೈಸ್ಡ್ (ಕಪ್ಪು ಬಣ್ಣದ) ಫಿನಿಷ್ ಅದರ ಜೊತೆ ಬಿಳಿ ಬಣ್ಣದ ಹೊಳಪಿನ ಹರಳುಗಳು ಬಹಳ ಹೊಳಪಿನಿಂದ ಕೂಡಿರುತ್ತದೆ. ರೆಡ್ ಹರಳು ಹಾಕಿದ್ರೆ ಮದುವೆ ಇತರ ಕಾರ್ಯಕ್ರಮಗಳಿಗೆ ತೊಡುವಾಗ ಗಮನದಲ್ಲಿರಬೇಕಾದ ಅಂಶ ವಾಚು ದೊಡ್ಡದಾಗಿದ್ದರೆ ಇನ್ನೊಂದು ಕೈಗೆ ಅದಕೊಪ್ಪುವ ಬಳೆ ಧರಿಸಬೇಕು. ಕೊರಳಿಗೆ ಹಾಕಿದ ಆಭರಣ ಕೂಡ ಅದಕ್ಕೆ ಹೊಂದಿಕೆಯಾಗಬೇಕು.

ದೊಡ್ಡ ವಾಚು, ದೊಡ್ಡ ಬಳೆ ಆಗಬೇಕೆಂದೇನಿಲ್ಲ. ನಿಮಗೆ ಇಷ್ಟವಾದದ್ದನ್ನು ಹಾಕಬಹುದು. ವಾಚು ಧರಿಸುವಾಗ ಇತರ ಆಭರಣಗಳು ಉಂಗುರ ಸ್ವಲ್ಪ ಹೊಂದಿಕೊಳ್ಳುವಂತೆ ಇರಬೇಕು. ಕಡಾ ತರ ವಾಚು ಇದ್ದರೆ ಇನ್ನೊಂದು ಕೈಗೆ ಬ್ರೆಸ್ಲೆಟ್ ಧರಿಸಬಹುದು. ಚೈನ್ ತೋರವಾಗಿದ್ದರೆ ದಪ್ಪ ಬಳೆ, ಸಪೂರದ ಎರಡು ಬಳೆ ಇನ್ನೊಂದು ಕೈಗೆ ಧರಿಸಬಹುದು. ಕೆಲವರಿಗೆ ವಾಚಿನೊಂದಿಗೆ ಬಳೆ ಧರಿಸುವ ಅಭ್ಯಾಸ ಇದೆ. ಅದು ಹಿತಕರವಲ್ಲ. ಕಾರಣ ಇಷ್ಟೇ, ವಾಚು ಹಾಳಾಗುತ್ತದೆ ಜೊತೆಗೆ ಬಳೆಯೂ ಹಾಳಾಗುತ್ತದೆ. ಅಂದವಾಗಿಯೂ ಇರುವುದಿಲ್ಲ, ಸಪೂರ ವಾಚು ಧರಿಸಿದಾಗ ಉಂಗುರಗಳ ಸಂಖ್ಯೆ ಜಾಸ್ತಿ ಹಾಕಬಹುದು. ಸಮಾರಂಭಕ್ಕೆ ಹೊಂದಿಕೊಂಡು ಧರಿಸಿ.

ಸೀರೆ, ಲೆಹೆಂಗಾ ಧರಿಸಿದಾಗ ಸಪೂರವಾಗಿರುವುದು ಧರಿಸಿ, ಪ್ಯಾಂಟ್, ಸ್ಕರ್ಟ್ ಧರಿಸಿದಾಗ ಸ್ವಲ್ಪ ಅಗಲವಾಗಿರುವುದು ಇರಲಿ. ಮ್ಯಾಟ್ ಫಿನಿಷ್ ಇರುವುದು ಸಾಧಾರಣ ಡೈಲಿವೇರ್‌ಗೆ ಸೂಕ್ತ, ನಿತ್ಯ ಬಳಸಿದ ವಾಚುಗಳು ಸಮಾರಂಭಕ್ಕೆ ಧರಿಸುವುದಿದ್ದರೆ ಕೊಳೆ ಇದೆಯೇ ಗಮನಿಸಿ ಸ್ವಚ್ಛಗೊಳಿಸಿ ಧರಿಸಿ. ವಾಚನ್ನು ಅದರ ಬಾಕ್ಸ್ ಅಥವಾ ಕಾಟನ್ ಬಟ್ಟೆಯ ಮೇಲೆ ತೆಗೆದು ಇಡಿ. ■

# ಫ್ಯಾಷನಬಲ್ ವಾಚು

**ವಾಚುಗಳು ಎಂದಿಗೂ ಔಟ್‌ಡೇಟೆಡ್ ಎನಿಸುವುದೇ ಇಲ್ಲ. ಫ್ಯಾಷನಬಲ್ ವಾಚುಗಳು ಮಾರುಕಟ್ಟೆಗೆ ಲಗ್ಗೆಯಿಟ್ಟದ್ದು ಹದಿಹರೆಯದ ಹುಡುಗ–ಹುಡುಗಿಯರನ್ನು ಬಹುವಾಗಿ ಸೆಳೆಯುತ್ತಿವೆ.**

■ **ಉಷಾರಾಣಿ**





ಚಿಕ್ಕಂದಿನಲ್ಲಿ ತೆಂಗಿನ ಗರಿಯಿಂದ ಮಾಡಿದ ವಾಚು ಧರಿಸಿ ಸಂಭ್ರಮಿಸಿದ್ದು ಈಗ ನೆನಪು. ಮತ್ತೆ ನಮ್ಮ ಕೈಗೆ ವಾಚು ಎಟಕಿದ್ದು ಹೈಸ್ಕೂಲ್ ಪಾಸಾದ ಬಳಿಕವೇ. ಆಗೆಲ್ಲ ಶ್ರೀಮಂತರು, ದೊಡ್ಡ ಹುದ್ದೆಯಲ್ಲಿದ್ದವರು ವಾಚು ಕಟ್ಟುತ್ತಿದ್ದರು. ಅಲ್ಲದೆ ವಾಚುಗಳ ವಿನ್ಯಾಸದಲ್ಲಿ ಆಯ್ಕೆಗಳೂ ಕಡಿಮೆ ಇದ್ದವು. ಅದೂ ಒಂದೋ ಬೆಲ್ಟ್ ವಾಚು ಇಲ್ಲವೇ ಚೈನ್ ವಾಚು. ಫ್ಯಾಷನ್ ಅಂತೂ ಇಲ್ಲವೇ ಇಲ್ಲ. ಆಮೇಲೆ ಡಯಲ್‌ಗಳಲ್ಲಿ ಮುಳ್ಳುಗಳ ಬದಲಿಗೆ ಸಂಖ್ಯೆಗಳು ಸಮಯ ತೋರಿಸುವಂಥ ವಾಚುಗಳವು. ಇನ್ನೂರು ಮುನ್ನೂರು ರೂಪಾಯಿಗಳಿಗೆಲ್ಲ ಸಿಕ್ಕುತ್ತಿದ್ದ ವಾಚುಗಳು ಮಕ್ಕಳ ಕೈಗಳಲ್ಲೂ ರಾರಾಜಿಸತೊಡಗಿದವು. ಆಗ ಸಮಯ ನೋಡಲಷ್ಟೇ ವಾಚು ಎಂಬಂಥ ದಿನಗಳಿದ್ದವು. ಇದಾಗಿ ಹಲವಾರು ವರ್ಷಗಳೇ ಕಳೆದಿವೆ.

ಇದೀಗ ಕಾಲ ಬದಲಾಗಿದೆ. ಈಗ ವಾಚುಗಳು ಬರೀ ಸಮಯವಷ್ಟೇ ಹೇಳುವುದಿಲ್ಲ. ವಾಚು ಕಟ್ಟಿಕೊಂಡವನ ಸಾಮಾಜಿಕ ಸ್ಥಾನಮಾನ, ಫ್ಯಾಷನ್‌ನ ಅಭಿರುಚಿ ಎಲ್ಲವನ್ನೂ ಸಾರಿ ಹೇಳುತ್ತದೆ. ಮೊಬೈಲ್‌ಗಳು ಸಮಯವನ್ನು ತೋರಿಸುತ್ತವಾದರೂ ಕೈಯಲ್ಲೊಂದು ಫ್ಯಾಷನಬಲ್ ವಾಚ್ ಇದ್ದರೆ ಕೈಗಳ ಅಂದವೇ ಬೇರೆ ಎಂಬಂತೆ ವಾಚುಗಳು ವಿನ್ಯಾಸದಲ್ಲಿ, ಆಕಾರದಲ್ಲಿ, ಬಣ್ಣಗಳಲ್ಲಿ ಲಭ್ಯವಾಗತೊಡಗಿವೆ. ಚಿನ್ನದ ಫ್ರೇಮ್, ಚಿನ್ನದ ಚೈನ್, ಪ್ಲಾಟಿನಂ ಅಂಚಿನ ಚಂದದ ವಾಚು, ಪ್ಲಾಸ್ಟಿಕ್‌ನಿಂದ ವಿನ್ಯಾಸ ಮಾಡಿದ ಬಣ್ಣಬಣ್ಣದ ವಾಚು, ಮಕ್ಕಳಿಗೆ, ದೊಡ್ಡವರಿಗೆ ಹೆಣ್ಣುಮಕ್ಕಳಿಗೆ, ಹರೆಯದ ಅಜ್ಜ ಅಜ್ಜಿಯರಿಗೆ ಹೀಗೆ. ಅದರಲ್ಲೂ ಸಮಾರಂಭಗಳಿಗೆ, ಕಚೇರಿಗೆ, ಜೀನ್ಸ್ ಹಾಕಿದಾಗ, ಸೀರೆ ಉಟ್ಟಾಗ, ಸೂಟ್ ಹಾಕಿದಾಗ.. ಹೀಗೆ ಬೇರೆ ಬೇರೆ ರೀತಿಯ ವಾಚುಗಳು ಕೈಗಳನ್ನು ಅಲಂಕರಿಸುತ್ತಿವೆ.

ಈಗ 100 ರೂಪಾಯಿಗಳಿಂದ ಹಿಡಿದು ದುಬಾರಿ 10 ಲಕ್ಷದವರೆಗಿನ ವಾಚುಗಳು ಲಭ್ಯ. ಆನ್‌ಲೈನ್‌ನಲ್ಲೂ ಸಿಗುತ್ತವೆ ವಾಚುಗಳು. ದೊಡ್ಡ ದೊಡ್ಡ ಡಯಲ್‌ನ ವಾಚ್ ಹದಿಹರೆಯದ ಹುಡುಗರಿಗೆ ಅಚ್ಚುಮೆಚ್ಚು ಎನಿಸಿದರೆ ಸಣ್ಣ ಡಯಲ್‌ನ ವಾಚು ಕಾಲೇಜು ಹುಡುಗಿಯರು ಇಷ್ಟಪಡುತ್ತಾರೆ. ‘ಬೋಲ್ಡ್ ಲುಕ್ ಕೊಡಲು ಬೋಲ್ಡ್ ವಾಚುಗಳೇ ಬೇಕು’ ಎನ್ನುತ್ತಾರೆ ಕಾಲೇಜು ಯುವತಿಯರು.

ಸ್ಮಾರ್ಟ್‌ವಾಚ್, ಸ್ಪೋರ್ಟ್ಸ್ ವಾಚ್, ಡಿಜಿಟಲ್ ವಾಚ್, ಟೈಮರ್ ವಾಚ್ (ವಾಕಿಂಗ್, ಈಜು, ವ್ಯಾಯಾಮ, ಕ್ರೀಡೆಗೆ ಹೋಗುವಾಗ ಬಳಸುವಂಥದ್ದು) ವಾಟರ್‌ಪ್ರೂಫ್ ವಾಚ್, ರೇಡಿಯಂ ವಾಚ್, ಕಾಕ್‌ಟೈಲ್ ವಾಚ್, ಬ್ರೇಸ್‌ಲೆಟ್‌ನಂತೆ ಕಾಣುವ ವಾಚ್, ಬಳೆಯನ್ನೇ ಹೋಲುವ ವಾಚ್‌ಗಳು ಲಭ್ಯ. ಆಕಾರ, ಗಾತ್ರಗಳಲ್ಲೂ ಅಷ್ಟೆ. ತ್ರಿಕೋನ, ವೃತ್ತಾಕಾರ, ಓವೆಲ್ ಶೇಪ್, ಚೌಕ, ಆಯತಾಕಾರಗಳ ವಾಚುಗಳು ಫ್ಯಾಷನ್‌ನೊಂದಿಗೆ ತಳುಕು ಹಾಕಿಕೊಂಡಿವೆ.

ಚಿನ್ನದ ಫ್ರೇಮ್ ಇರುವ ವಾಚು, ಡಯಲ್‌ನ ಸುತ್ತ ಡೈಮಂಡ್ ಹರಳಿನ ವಾಚು, ಮುತ್ತುಗಳನ್ನು ಒತ್ತೊತ್ತಾಗಿ ಪೋಣಿಸಿದಂತೆ ಕಾಣುವ ವಾಚು, ಅಪ್ಪಟ ಚಿನ್ನದ ಚೈನ್ ಇರುವ ವಾಚು ದುಬಾರಿ ಎನಿಸಿದರೂ ಸಮಾರಂಭಗಳಿಗೆ, ಪಾರ್ಟಿ ವೇರ್‌ಗೆ ಅತ್ಯಂತ ಸೂಕ್ತ ಎನಿಸಿವೆ. ಈಗ ಏನಿದ್ದರೂ ಫ್ಯಾಷನಬಲ್ ವಾಚುಗಳದ್ದೇ ಜಮಾನ...! ■